KAMD400006372021

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಮಳವಳ್ಳಿ**

ಉಪಸ್ಥಿತರುಃ ***ಮಹೇಂದ್ರ ಎಂ., ಬಿ.ಎ. ಎಲ್.ಎಲ್.ಬಿ.***
***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು***
**ಜೆ.ಎಂ.ಎಫ್.ಸಿ., *ಮಳವಳ್ಳಿ.***

**ದಿನಾಂಕಃ 2 ನೇ ಏಪ್ರಿಲ್ 2026 ನೇ ಇಸವಿ**

**ಸಿ.ಸಿ. ಸಂಖ್ಯೆಃ 142/2021**

**ಫಿರ್ಯಾದಿದಾರ** : ಸರ್ಕಾರದ ಪರವಾಗಿ
**ಹಲಗೂರು ಪೊಲೀಸ್ ಠಾಣೆ.**

**(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

**---** ವಿರುದ್ಧ **---**

**ಆರೋಪಿತರು** : **1. ರವಿಕುಮಾರ್.ವಿ ಬಿನ್ ವೆಂಕಟಯ್ಯ**
**(ಮೃತರಾಗಿರುತ್ತಾರೆ)**

**2. ನಾಗೇಶ್.ಜಿ.ಎನ್ ಬಿನ್ ನಾಗರಾಜು**
**ವಯಸ್ಸು:** 18 ವರ್ಷ,
**ವಾಸ :** ಗೊಲ್ಲರದೊಡ್ಡಿ ಗ್ರಾಮ,
ಕಸಬಾ ಹೋಬಳಿ, ಮದ್ದೂರು ತಾಲ್ಲೂಕು,
ಮಂಡ್ಯ ಜಿಲ್ಲೆ.

**(ಪ್ರತಿನಿಧಿಸುವವರು ಶ್ರೀ. ಕೆ.ಎಸ್.ಎಂ., ವಕೀಲರು)**

**3. ಕೃಷ್ಣಪ್ಪ ಬಿನ್ ಲೇಟ್ ಮರಿಸಿದ್ದಯ್ಯ**
**ವಯಸ್ಸು:** 50 ವರ್ಷ,
**ವಾಸ :** ಮಾರೇಗೌಡದೊಡ್ಡಿ ಗ್ರಾಮ,
ವಿರೂಪಾಕ್ಷಿಪುರ ಹೋಬಳಿ, ಚನ್ನಪಟ್ಟಣ ತಾಲ್ಲೂಕು,
ರಾಮನಗರ ಜಿಲ್ಲೆ.

**(Pleaded guilty)**

**4. ನಾಗೇಂದ್ರ.ಜಿ.ಎನ್ ಬಿನ್ ನಾಗರಾಜು**
**ವಯಸ್ಸು:** 28 ವರ್ಷ,
**ವಾಸ :** ಗೊಲ್ಲರದೊಡ್ಡಿ ಗ್ರಾಮ,
ಕಸಬಾ ಹೋಬಳಿ, ಮದ್ದೂರು ತಾಲ್ಲೂಕು,
ಮಂಡ್ಯ ಜಿಲ್ಲೆ.

**(Pleaded guilty)**

| | |
|---|---|
| ಕೃತ್ಯ ನಡೆದ ದಿನಾಂಕ | 18.02.2021 |
| ಪ್ರಾವಿಧಾನಗಳು | ಭಾ.ದಂ.ಸಂ.ಕಲಂ. 279, 337 ಮತ್ತು 304(ಎ), ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 3 ಸಹವಾಚಕ 181. |
| ಪ್ರಥಮ ವರ್ತಮಾನ ನೀಡಿದವರ ಹೆಸರು | ಶ್ರೀ ನಾಗರಾಜು |
| ದೋಷಾರೋಪಣಾ ಪಟ್ಟಿ ಸಲ್ಲಿಸಿದ ದಿನಾಂಕ | 02.12.2021 |
| ಸಾಕ್ಷ್ಯ ವಿಚಾರಣೆ ಪ್ರಾರಂಭವಾದ ದಿನಾಂಕ | 13.10.2025 |
| ತೀರ್ಪು ಉಚ್ಚರಿಸಿದ ದಿನಾಂಕ | 02.04.2026 |
| ಅಂತಿಮ ಆದೇಶ | 2 ನೇ ಆರೋಪಿ ದೋಷಿಯೆಂದು ತೀರ್ಮಾನ |

**(ಮಹೇಂದ್ರ ಎಂ.)**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಮಳವಳ್ಳಿ.**

## **::ತೀರ್ಪು::**

ಹಲಗೂರು ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕರು, ಆರೋಪಿತರ ವಿರುದ್ಧ **ಭಾ.ದಂ.ಸಂ.ಕಲಂ. 279, 337 ಮತ್ತು 304(ಎ), ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 146 ಸಹವಾಚಕ 196, 5(1) ಸಹವಾಚಕ 180, 3 ಸಹವಾಚಕ 181, 39 ಸಹವಾಚಕ 192(1)** ರಡಿಯಲ್ಲಿ ಅಪರಾಧ ಎಸಗಿರುತ್ತಾರೆಂದು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಃ**

ದಿನಾಂಕಃ 18.02.2021 ರಂದು ರಾತ್ರಿ 8.15 ಗಂಟೆ ಸಮಯದಲ್ಲಿ ಹಲಗೂರು ಪೊಲೀಸ್ ಠಾಣಾ ವ್ಯಾಪ್ತಿಯ ಹುಸ್ಕೂರು ಗ್ರಾಮದ ಹುಸ್ಕೂರು ಸರ್ಕಲ್ ಬಳಿ ಇರುವ ಜಯರಾಮು ಎಂಬುವವರ ಜಮೀನಿನ ನೇರದ ಹಲಗೂರು-ಕೆ.ಎಂ.ದೊಡ್ಡಿ ರಸ್ತೆಯಲ್ಲಿ 1 ನೇ ಆರೋಪಿಯು ಕೆ.ಎಂ.ದೊಡ್ಡಿ ಕಡೆಯಿಂದ ಹಲಗೂರು ಕಡೆಗಾದಂತೆ 3 ನೇ ಆರೋಪಿಯು ಚಾಸಾ11 ರವರ ಶೋರೂಮ್‌ನಲ್ಲಿ ಕ್ರಯಕ್ಕೆ ಖರೀದಿಸಿದ್ದ ಚಾಸಿಸ್ ನಂ.MD625CF11E1H45879 ಮತ್ತು ಇಂಜಿನ್ ನಂ.CF1HE1072402 ರ ನೊಂದಣಿ ಮಾಡಿಸದ ಹಾಗೂ ವಿಮೆ ಇಲ್ಲದ ಬೈಕನ್ನು ಹಾಗೂ 2 ನೇ ಆರೋಪಿಯು ಚಾಲನಾ ಪರವಾನಿಗೆ ಇಲ್ಲದೇ ವಿಮೆ ಇಲ್ಲದ 4 ನೇ ಆರೋಪಿಯ ಬಾಬ್ತು ಕೆಎ-11-ಇಎಸ್-6194 ನಂಬರಿನ ಮೋಟಾರ್ ಸೈಕಲ್ ಅನ್ನು ಹಲಗೂರು ಕಡೆಯಿಂದ ಕೆ.ಎಂ.ದೊಡ್ಡಿ ಕಡೆಗಾದಂತೆ ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಇಬ್ಬರೂ ಮುಖಾಮುಖಿಯಾಗಿ ಡಿಕ್ಕಿ ಹೊಡೆಸಿ ಅಪಘಾತ ಉಂಟುಮಾಡಿಕೊಂಡು ಇಬ್ಬರೂ ಕೆಳಕ್ಕೆ ಬಿದ್ದು, ತಲೆಗೆ ತೀವ್ರ ಸ್ವರೂಪದ ಪೆಟ್ಟಾಗಿದ್ದ 1 ನೇ ಆರೋಪಿಯು ಚಿಕಿತ್ಸೆಯಿಂದ ಗುಣಮುಖರಾಗದೇ ದಿನಾಂಕ 13.03.2021 ರಂದು ಸಂಜೆ 4.40 ಗಂಟೆ ಸಮಯದಲ್ಲಿ ಮಂಡ್ಯ ಸ್ಯಾಂಜೋ ಆಸ್ಪತ್ರೆಯಲ್ಲಿ ಮೃತರಾಗಿರುತ್ತಾರೆ. 2 ನೇ

ಆರೋಪಿಯ ಎಡಭುಜಕ್ಕೆ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ ಎಂಬುದು ಅಭಿಯೋಜನೆ ಪ್ರಕರಣದ ಸಾರಾಂಶವಾಗಿರುತ್ತದೆ.

3. ಪ್ರಾಸಾ4 ರವರು ಚಾಸಾ1 ರವರು ದಿನಾಂಕ 24.02.2021 ರಂದು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಗುನ್ಹೆ ಸಂಖ್ಯೆ:50/2021 ರಂತೆ ಆರೋಪಿತರ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತಾರೆ. ಪ್ರಾಸಾ5 ರವರು ಪ್ರಕರಣದ ತನಿಖೆ ಮುಕ್ತಾಯಗೊಳಿಸಿ ಈ ನ್ಯಾಯಾಲಯಕ್ಕೆ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

4. ಈ ನ್ಯಾಯಾಲಯವು ದೋಷಾರೋಪಣ ಪಟ್ಟಿಯನ್ನು ಪರಿಶೀಲಿಸಿ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ **ಕಲಂ. 279, 337 ಮತ್ತು 304(ಎ), ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 146 ಸಹವಾಚಕ 196, 5(1) ಸಹವಾಚಕ 180, 3 ಸಹವಾಚಕ 181, 39 ಸಹವಾಚಕ 192(1)** ರಡಿಯಲ್ಲಿ ಸಂಜ್ಞೆ ತೆಗೆದುಕೊಂಡಿರುತ್ತದೆ.

5. ಈ ನ್ಯಾಯಾಲಯವು ಆರೋಪಿತರಿಗೆ ನ್ಯಾಯಾಲಯಕ್ಕೆ ಹಾಜರಾಗಲು ಸಮನ್ಸ್ ಜಾರಿ ಮಾಡಲು ಆದೇಶಿಸಿದ್ದು, ಅದರಂತೆ ಆರೋಪಿತರಿಗೆ ಸಮನ್ಸ್ ಜಾರಿಯಾಗಿ ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. 2 ನೇ ಆರೋಪಿಯು ನ್ಯಾಯಾಲಯಕ್ಕೆ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನು ಪಡೆದುಕೊಂಡಿರುತ್ತಾರೆ. ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರ ಪ್ರಕಾರ ದೋಷಾರೋಪಣ ಪಟ್ಟಿಯ ನಕಲನ್ನು 2 ನೇ ಆರೋಪಿಗೆ ಪೂರೈಸಿರುತ್ತದೆ. ಆರೋಪಿತರ ವಿರುದ್ಧ ಆರೋಪಣೆ ರಚಿಸಿ ಓದಿ ಹೇಳಲಾಗಿ 2 ನೇ ಆರೋಪಿಯು ತಾನು ತಪ್ಪು ಮಾಡಿರುವುದಿಲ್ಲವೆಂದು, ವಿಚಾರಣೆ ಆಗಬೇಕೆಂದು ಬಯಸಿರುತ್ತಾರೆ. 3 ಮತ್ತು 4 ನೇ ಆರೋಪಿತರು ತಪ್ಪು ಒಪ್ಪಿಕೊಂಡು ದಂಡ ಪಾವತಿ ಮಾಡಿರುತ್ತಾರೆ. ಅದ್ದರಿಂದ

2ನೇ ಆರೋಪಿಯ ವಿರುದ್ಧ ಮಾತ್ರ ಪ್ರಕರಣ ನಡೆದಿರುತ್ತದೆ. (2ನೇ ಆರೋಪಿಯನ್ನು ಈ ಮುಂದೆ ಆರೋಪಿ ಎಂದು ಸಂಭೋದಿಸಲಾಗಿರುತ್ತದೆ.)

6. ಈ ನ್ಯಾಯಾಲಯವು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಮನವಿಯ ಮೇರೆಗೆ ದೋಷಾರೋಪಣ ಪಟ್ಟಿಯಲ್ಲಿ ನಮೂದಿಸಿರುವ ಸಾಕ್ಷಿದಾರರಿಗೆ ಸಮನ್ಸ್ ಜಾರಿ ಮಾಡಲು ಆದೇಶಿಸಿರುತ್ತದೆ.

7. ಅಭಿಯೋಜನೆಯು ತನ್ನ ಪರವಾಗಿ ಒಟ್ಟು 5 ಜನ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿದ್ದು, ಸದರಿ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ತನ್ನ ಪರವಾಗಿ ನಿಪಿ-1 ರಿಂದ 19 ಎಂದು ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿರುತ್ತದೆ.

8. ಅಭಿಯೋಜನೆಯ ಪ್ರಕರಣದ ಸಾಕ್ಷ್ಯ ವಿಚಾರಣೆ ಮುಕ್ತಾಯವಾದ ನಂತರ ಈ ನ್ಯಾಯಾಲಯವು ಆರೋಪಿಯ ಹೇಳಿಕೆಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಅಭಿಲೇಖಿಸಿರುತ್ತದೆ. ಆರೋಪಿಗೆ ಅಭಿಯೋಜನೆಯ ಪ್ರಕರಣದ ಸಾಕ್ಷಿದಾರರ ಸಾಕ್ಷ್ಯ ವಿಚಾರಣಾ ಸಾರಾಂಶವನ್ನು ಓದಿ ಹೇಳಲಾಗಿ ಆರೋಪಿಯು ಅದನ್ನು ನಿರಾಕರಿಸಿರುತ್ತಾರೆ. ಆರೋಪಿಯು ಮುಂದುವರೆದು ತನ್ನ ಪರವಾಗಿ ಸಾಕ್ಷ್ಯ ವಿಚಾರಣೆ ಇರುವುದಿಲ್ಲವೆಂದು ಹಾಗೂ ತಾನು ಹೇಳುವುದು ಏನು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

9. ಈ ಪ್ರಕರಣವನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತದೆ.

**::ಅಂಶಗಳು ::**

**1. ದಿನಾಂಕಃ 18.02.2021 ರಂದು ರಾತ್ರಿ 8.15 ಗಂಟೆ ಸಮಯದಲ್ಲಿ ಹಲಗೂರು ಪೊಲೀಸ್ ಠಾಣಾ ವ್ಯಾಪ್ತಿಯ ಹುಸ್ಕೂರು ಗ್ರಾಮದ ಹುಸ್ಕೂರು ಸರ್ಕಲ್ ಬಳಿ ಇರುವ ಜಯರಾಮು ಎಂಬುವವರ ಜಮೀನಿನ ನೇರದ**

ಹಲಗೂರು-ಕೆ.ಎಂ.ದೊಡ್ಡಿ ರಸ್ತೆಯಲ್ಲಿ 1 ನೇ ಆರೋಪಿಯು ಕೆ.ಎಂ.ದೊಡ್ಡಿ ಕಡೆಯಿಂದ ಹಲಗೂರು ಕಡೆಗಾದಂತೆ 3 ನೇ ಆರೋಪಿಯ ಚಾಸಾ11 ರವರ ಶೋರೂಂನಲ್ಲಿ ಕ್ರಯಕ್ಕೆ ಪಡೆದ ನೊಂದಣಿ ಮಾಡಿಸದ ಹಾಗೂ ವಿಮೆ ಇಲ್ಲದ ಬೈಕನ್ನು ಹಾಗೂ 2 ನೇ ಆರೋಪಿಯು 4 ನೇ ಆರೋಪಿಯ ಬಾಬ್ತು ಕೆಎ-11-ಇಎನ್-6194 ನಂಬರಿನ ಮೋಟಾರ್ ಸೈಕಲ್ ಅನ್ನು ಹಲಗೂರು ಕಡೆಯಿಂದ ಕೆ.ಎಂ.ದೊಡ್ಡಿ ಕಡೆಗಾದಂತೆ ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮುಖಾಮುಖಿಯಾಗಿ ಡಿಕ್ಕಿ ಹೊಡೆಸಿ ಅಪಘಾತ ಉಂಟು ಮಾಡಿರುತ್ತಾರೆ. ಆದ್ದರಿಂದ 2 ನೇ ಆರೋಪಿಯು ಭಾ.ದಂ.ಸಂ.ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತಾರೆಯೇ ?

2. ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿಯು ಕೆಎ-11-ಇಎನ್-6194 ನಂಬರಿನ ಮೋಟಾರ್ ಸೈಕಲ್ ಅನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಅಪಘಾತ ಪಡಿಸಿದ ಪರಿಣಾಮವಾಗಿ 1 ನೇ ಆರೋಪಿಯ ತಲೆಗೆ ತೀವ್ರ ಸ್ವರೂಪದ ಪೆಟ್ಟಾಗಿ, ದಿನಾಂಕ 13.03.2021 ರಂದು ಸಂಜೆ 4.40 ಗಂಟೆ ಸಮಯದಲ್ಲಿ ಮಂಡ್ಯ ಸ್ಯಾಂಜೋ ಆಸ್ಪತ್ರೆಯಲ್ಲಿ ಮೃತರಾಗಿರುತ್ತಾರೆ. ಆದ್ದರಿಂದ 2 ನೇ ಆರೋಪಿಯು ಭಾ.ದಂ.ಸಂ.ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತಾರೆಯೇ ?

3. ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿಯು ಕೆಎ-11-ಇಎನ್-6194 ನಂಬರಿನ ಮೋಟಾರ್ ಸೈಕಲ್ ಅನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಅಪಘಾತ ಪಡಿಸಿದ ಪರಿಣಾಮವಾಗಿ 2 ನೇ ಆರೋಪಿಯ ಎಡಭುಜಕ್ಕೆ ಸಾಮಾನ್ಯ ಸ್ವರೂಪದ ಪೆಟ್ಟಾಗಿರುತ್ತದೆ. ಆದ್ದರಿಂದ 2 ನೇ ಆರೋಪಿಯು ಭಾ.ದಂ.ಸಂ.ಕಲಂ 337 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತಾರೆಯೇ ?

**4. ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿಯು ಕೆಎ-11-ಇಎನ್-6194 ನಂಬರಿನ ಮೋಟಾರ್ ಸೈಕಲ್ ಅನ್ನು ಚಾಲನಾ ಪರವಾನಿಗೆ ಇಲ್ಲದೇ ಸಾರ್ವಜನಿಕ ಸ್ಥಳದಲ್ಲಿ ಚಾಲನೆ ಮಾಡಿರುತ್ತಾರೆ. ಆದಕಾರಣ 2 ನೇ ಆರೋಪಿಯು ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 3 ಸಹವಾಚಕ 181 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತಾರೆಯೇ ?**

**5. ಮಾಡುವ ಆದೇಶ ಏನು ?**

10. ಅಭಿಯೋಜನೆಯ ಪರ ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿಯ ಪರ ವಕೀಲರ ವಾದವನ್ನು ಆಲಿಸಲಾಯಿತು ಹಾಗೂ ಕಡತದಲ್ಲಿರುವ ದಾಖಲೆಗಳನ್ನು, ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳನ್ನು ಈ ನ್ಯಾಯಾಲಯವು ಕೂಲಂಕುಷವಾಗಿ ಪರಿಶೀಲಿಸಿ, ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

**ಅಂಶ ಸಂಖ್ಯೆ 1: ನಕರಾತ್ಮಕವಾಗಿ**
**ಅಂಶ ಸಂಖ್ಯೆ 2: ನಕರಾತ್ಮಕವಾಗಿ**
**ಅಂಶ ಸಂಖ್ಯೆ 3: ನಕರಾತ್ಮಕವಾಗಿ**
**ಅಂಶ ಸಂಖ್ಯೆ 4: ಸಕಾರಾತ್ಮಕವಾಗಿ**
**ಅಂಶ ಸಂಖ್ಯೆ 5: ಅಂತಿಮ ಆದೇಶದಂತೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ**

## **::ಕಾರಣಗಳು::**

11. **ಅಂಶ ಸಂಖ್ಯೆ 1 ರಿಂದ 3** ಃ ಈ ಮೂರು ಅಂಶಗಳಿಗೆ ಸಂಬಂಧಿಸಿದಂತೆ ಚರ್ಚಿಸುವ ವಿಷಯಗಳು ಒಂದೇ ಆಗಿದ್ದು ಚರ್ಚೆಗಳು ಪುನಾರಾವರ್ತನೆ ಆಗುವುದನ್ನು ತಡೆಗಟ್ಟಲು ಈ ಮೂರು ಅಂಶಗಳನ್ನು ಚರ್ಚೆಗೆ ಒಟ್ಟಿಗೆ ತೆಗೆದುಕೊಳ್ಳಲಾಗಿದೆ.

12. ಪೊಲೀಸರು 2 ನೇ ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ **279, 337 ಮತ್ತು 304(ಎ),** ರಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಈ ಪ್ರಾವಿಧಾನಗಳ ಬಗ್ಗೆ ನೋಡುವುದಾದರೆ.

**ಭಾರತೀಯ ದಂಡ ಸಂಹಿತೆ ಕಲಂ.279-ಸಾರ್ವಜನಿಕ ರಸ್ತೆಯಲ್ಲಿ ದುಡುಕಿನಿಂದ ವಾಹನ ನಡೆಸುವುದು ಅಥವಾ ಸವಾರಿ ಮಾಡುವುದುಃ-** ಮನುಷ್ಯನ ಪ್ರಾಣಕ್ಕೆ ಅಪಾಯವಾಗುವಂತೆ ಅಥವಾ ಯಾವನೇ ಇತರ ವ್ಯಕ್ತಿಗೆ ಗಾಯ ಅಥವಾ ತೊಂದರೆಯುಂಟುಮಾಡುವ ಹಾಗೆ ಸಾರ್ವಜನಿಕ ರಸ್ತೆಯಲ್ಲಿ ದುಡುಕಿನಿಂದ ಅಥವಾ ನಿರ್ಲಕ್ಷ್ಯದಿಂದ ಯಾವನೇ ವ್ಯಕ್ತಿಯು ವಾಹನ ನಡೆಸಿದರೆ ಅಥವಾ ಸವಾರಿ ಮಾಡಿದರೆ ಅವನು ಆರು ತಿಂಗಳವರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಲ್ಲಿ ದಂಡಿತನಾಗತಕ್ಕದ್ದು.

**ಭಾರತೀಯ ದಂಡ ಸಂಹಿತೆ ಕಲಂ.337-ಇತರರ ಪ್ರಾಣಕ್ಕೆ ಅಥವಾ ದೈಹಿಕ ಸುರಕ್ಷತೆಗೆ ಅಪಾಯವನ್ನುಂಟು ಮಾಡುವ ಕೃತ್ಯದಿಂದ ಸಾಮಾನ್ಯ ಗಾಯವನ್ನುಂಟುಮಾಡುವುದುಃ-** ಯಾವನೇ ವ್ಯಕ್ತಿಯು ಮನುಷ್ಯನ ಪ್ರಾಣಕ್ಕೆ ಅಥವಾ ಇತರರ ದೈಹಿಕ ಸುರಕ್ಷತೆಯನ್ನು ಅಪಾಯಕ್ಕೀಡು ಮಾಡುವಂತೆ ದುಡುಕಿನಿಂದ ಅಥವಾ ನಿರ್ಲಕ್ಷ್ಯದಿಂದ ಕೃತ್ಯವನ್ನು ಮಾಡಿ ಯಾವನೇ ವ್ಯಕ್ತಿಯು ಸಾಮಾನ್ಯ ಗಾಯವುಂಟುಮಾಡಿದರೆ, ಅವನು ಎರಡು ವರ್ಷಗಳವರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಲ್ಲಿ ದಂಡಿತನಾಗತಕ್ಕದ್ದು.

**ಭಾರತೀಯ ದಂಡ ಸಂಹಿತೆ ಕಲಂ.304(ಎ)-ನಿರ್ಲಕ್ಷ್ಯತನದಿಂದ ಮರಣವುಂಟುಮಾಡುವುದುಃ-**ಯಾವನೇ ವ್ಯಕ್ತಿಯು ಅಪರಾಧ ಮಾಡವ ಹತ್ಯೆಯೆಂದು ಪರಿಗಣಿಸುವ ಯಾವುದೇ ದುಡುಕಿನ ಅಥವಾ ನಿರ್ಲಕ್ಷ್ಯದ ಕೃತ್ಯವನ್ನು ಮಾಡಿ ಯಾವನೇ ವ್ಯಕ್ತಿಯು ಮರಣವುಂಟುಮಾಡಿದರೆ, ಅವನು ಎರಡು ವರ್ಷಗಳವರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಲ್ಲಿ ದಂಡಿತನಾಗತಕ್ಕದ್ದು.

13. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಕುಲದೀಪ್ ಸಿಂಗ್ ವಿರುದ್ಧ ರಾಜ್ಯದ ಪರವಾಗಿ ಹಿಮಾಚಲ ಪ್ರದೇಶ ರಾಜ್ಯ **((2008)14 ಎಸ್.ಸಿ.ಸಿ.795)** ಪಕ್ರರಣದಲ್ಲಿ **9** ನೇ ಕಂಡಿಕೆಯಲ್ಲಿ ನಿರ್ಲಕ್ಷ್ಯತನದ ಬಗ್ಗೆ ಈ ಕೆಳಕಂಡಂತೆ ವಿವರಿಸಿರುತ್ತದೆ.

"General principles of the law of negligence:- Negligence is a specific fort and many given circumstances is the failure to exercise that care which the circumstances demand, what **amounts** to negligence depends on the facts of each particular case. It may consist in omitting to do so noting which ought to be done or in doing something which ought to be done either in different manner or not at all. Where there is no duty to exercise care, negligence in the popular sense has no legal consequences, where there is a duty to exercise care, reasonable care must be taken to avoid acts or omissions which can be reasonably fore seen to be likely to cause physical injury to the persons or property. The decree of care required in the particular care depends on the surrounding circumstances, and may very according to the **amount** of the risk to be encountered and the magnitude of the prospective injury. The duty of care is owed only to those persons who are in the area of foreseeable danger, the fact that the act of the defendant violated his duty of care to a third person does not enable to plaintiff who is also injured by the same act to claim unless he is also within the area of foreseeable danger. The same act or omission may accordingly in some circumstances involve liability as being negligent

although in other circumstances it will not do so. The material considerations are the absence of care which is on the part of the defendant owed to the plaintiff in the circumstances of the care damage suffered by the plaintiff, together with the demonstrable relation of cause and effect between the two”.

14. ಈ ಮೇಲ್ಕಂಡಂತೆ ಚರ್ಚಿಸಿದ ಪ್ರಾವಿಧಾನಗಳ ಪ್ರಕಾರ ಮೋಟಾರು ಅಪಘಾತವು ವಾಹನದಿಂದ ಸಾರ್ವಜನಿಕ ರಸ್ತೆಯಲ್ಲಿ ಆಗಿರುತ್ತದೆ, 2 ನೇ ಆರೋಪಿಯು ಮಾನವನಿಗೆ ಅಪಾಯವಾಗುವ ರೀತಿಯಲ್ಲಿ ವಾಹನ ಚಾಲನೆ ಮಾಡಿರುತ್ತಾರೆಂದು, ಸದರಿ ಚಾಲನೆಯಿಂದ ಒಬ್ಬ ವ್ಯಕ್ತಿಯು ಮೃತಪಟ್ಟಿರುತ್ತಾರೆಂದು, ಒಬ್ಬ ವ್ಯಕ್ತಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆಂದು ನಿಸ್ಸಂದೇಹವಾಗಿ ರುಜುವಾತುಪಡಿಸುವ ಹೊಣೆಗಾರಿಕೆಯು ಅಭಿಯೋಜನೆಯ ಮೇಲಿರುತ್ತದೆ.

15. ಅಭಿಯೋಜನೆಯು ಆರೋಪಿಗಳ ಮೇಲಿರುವ ಆರೋಪಗಳನ್ನು ನಿಸ್ಸಂದೇಹವಾಗಿ ರುಜುವಾತುಪಡಿಸಲು ತನ್ನ ಪರವಾಗಿ 5 ಜನ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಕೊಂಡು, ತನ್ನ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ಒಟ್ಟು ನಿಪಿ1 ರಿಂದ 19 ಎಂದು ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿರುತ್ತದೆ.

16. ಅಭಿಯೋಜನೆಯ ಪರವಾಗಿ ವಿಚಾರಣೆಗೆ ಒಳಪಟ್ಟ ಸಾಕ್ಷಿದಾರರ ಸಾಕ್ಷ್ಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಚಾಸಾ2 ಶ್ರೀ ಶಿವಲಿಂಗಯ್ಯ ರವರು ಅಭಿಯೋಜನೆಯ ಪ್ರಕಾರ ಘಟನೆಯ ಪ್ರತ್ಯಕ್ಷ ಸಾಕ್ಷಿದಾರರು ಹಾಗೂ ಮಹಜರ್‌ಗೆ ಸಹಕರಿಸಿದ ಬಗ್ಗೆ ಸಾಕ್ಷ್ಯ ನುಡಿಯುವ ಸಾಕ್ಷಿದಾರರಾಗಿದ್ದು, ಇವರು ಅಭಿಯೋಜನೆ ಪರ ಪ್ರಾಸಾ1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಇವರು ತನ್ನ ಪರವಾಗಿ ನಿಪಿ1 ಎಂದು ಸ್ಥಳ ಪಂಚನಾಮೆಯನ್ನು, ನಿಪಿ1(ಎ) ಎಂದು ಅದರಲ್ಲಿರುವ ತನ್ನ ಸಹಿಯನ್ನು, ನಿಪಿ2 ರಿಂದ 5 ಎಂದು ಫೋಟೋಗಳನ್ನು, ನಿಪಿ6 ಮತ್ತು 7 ಎಂದು

ಹೇಳಿಕೆ ಮತ್ತು ಮರುಹೇಳಿಕೆಯನ್ನು ಗುರುತಿಸಿಕೊಂಡಿರುತ್ತಾರೆ. ಚಾಸಾ3 ಶ್ರೀ ಸತೀಶ್ ಮತ್ತು ಚಾಸಾ4 ಶ್ರೀ ಚಿಕ್ಕಣ್ಣ ರವರು ಅಭಿಯೋಜನೆಯ ಪ್ರಕಾರ ಪಂಚನಾಮೆ ಸಾಕ್ಷಿದಾರರಾಗಿದ್ದು, ಇವರು ಅಭಿಯೋಜನೆ ಪರ ಕ್ರಮವಾಗಿ ಪ್ರಾಸಾ2 ಮತ್ತು 3 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಪ್ರಾಸಾ2 ತನ್ನ ಪರವಾಗಿ ನಿಪಿ1(ಬಿ) ಎಂದು ಸ್ಥಳ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ಗುರುತಿಸಿಕೊಂಡಿರುತ್ತಾರೆ.

17. ಚಾಸಾ18 ಶ್ರೀ ಪುರುಷೋತ್ತಮ್.ಜಿ ರವರು ಪೊಲೀಸ್ ಅಧಿಕಾರಿಯಾಗಿದ್ದು, ಇವರು ದೂರು ಸ್ವೀಕರಿಸಿ ಪ್ರಕರಣ ದಾಖಲು ಮಾಡಿದ ಬಗ್ಗೆ ಸಾಕ್ಷ್ಯ ನುಡಿಯುವ ಸಾಕ್ಷಿದಾರರಾಗಿದ್ದು, ಇವರು ಅಭಿಯೋಜನೆಯ ಪರ ಪ್ರಾಸಾ4 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಇವರು ತನ್ನ ಪರವಾಗಿ ನಿಪಿ8 ಎಂದು ದೂರನ್ನು, ನಿಪಿ8(ಎ) ಎಂದು ಅದರಲ್ಲಿರುವ ತನ್ನ ಸಹಿಯನ್ನು, ನಿಪಿ9 ಎಂದು ಪ್ರಥಮ ವರ್ತಮಾನ ವರದಿಯನ್ನು, ನಿಪಿ9(ಎ) ಎಂದು ಅದರಲ್ಲಿರುವ ತನ್ನ ಸಹಿಯನ್ನು, ನಿಪಿ1(ಸಿ) ಎಂದು ಸ್ಥಳ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು, ನಿಪಿ10 ಎಂದು ಕಚ್ಚಾ ನಕಾಶೆಯನ್ನು, ನಿಪಿ10(ಎ) ಎಂದು ಅದರಲ್ಲಿರುವ ತನ್ನ ಸಹಿಯನ್ನು, ನಿಪಿ11 ಎಂದು ಶವ ತನಿಖೆಯನ್ನು, ನಿಪಿ11(ಎ) ಎಂದು ಅದರಲ್ಲಿರುವ ತನ್ನ ಸಹಿಯನ್ನು, ನಿಪಿ12 ಮತ್ತು 13 ಎಂದು ಕಲಂ 133 ರ ನೋಟೀಸ್ ಮತ್ತು ಪ್ರತ್ಯುತ್ತರವನ್ನು, ನಿಪಿ12(ಎ) ಮತ್ತು 13(ಎ) ಎಂದು ಅವುಗಳಲ್ಲಿರುವ ತನ್ನ ಸಹಿಗಳನ್ನು, ನಿಪಿ14 ಎಂದು ಇಂಟಿಮ್ನಿಟಿ ಬಾಂಡ್ ಅನ್ನು, ನಿಪಿ14(ಎ) ಎಂದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿಕೊಂಡಿರುತ್ತಾರೆ. ಚಾಸಾ19 ಶ್ರೀ ಧನರಾಜ್.ಡಿ.ಪಿ ರವರು ಪೊಲೀಸ್ ಅಧಿಕಾರಿಯಾಗಿದ್ದು, ಇವರು ತನಿಖೆ ಮುಂದುವರೆಸಿ ತನಿಖೆ ಪೂರೈಸಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ ಬಗ್ಗೆ ಸಾಕ್ಷ್ಯ ನುಡಿಯುವ ಸಾಕ್ಷಿದಾರರಾಗಿದ್ದು, ಇವರು ಅಭಿಯೋಜನೆಯ ಪರ ಪ್ರಾಸಾ5 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಇವರು ತನ್ನ ಪರವಾಗಿ ನಿಪಿ15 ಎಂದು ಪಿ.ಎಂ ವರದಿಯನ್ನು, ನಿಪಿ15(ಎ) ಎಂದು ಅದರಲ್ಲಿರುವ ತನ್ನ ಸಹಿಯನ್ನು, ನಿಪಿ16 ಎಂದು ಆರ್‌ಟಿಓ ರವರಿಗೆ ಸಲ್ಲಿಸಿದ ಮನವಿಯನ್ನು, ನಿಪಿ16(ಎ)

ಎಂದು ಅದರಲ್ಲಿರುವ ತನ್ನ ಸಹಿಯನ್ನು, ನಿಪಿ17 ಎಂದು ಐ.ಎಂ.ವಿ ವರದಿಯನ್ನು, ನಿಪಿ17(ಎ) ಎಂದು ಅದರಲ್ಲಿರುವ ತನ್ನ ಸಹಿಯನ್ನು, ನಿಪಿ18 ಮತ್ತು 19 ಎಂದು ಕಲಂ 133 ರ ನೋಟೀಸ್ ಮತ್ತು ಪ್ರತ್ಯುತ್ತರವನ್ನು, ನಿಪಿ18(ಎ) ಮತ್ತು 19(ಎ) ಎಂದು ಅವುಗಳಲ್ಲಿರುವ ತನ್ನ ಸಹಿಗಳನ್ನು ಗುರುತಿಸಿಕೊಂಡಿರುತ್ತಾರೆ.

18. ಅಭಿಯೋಜನೆಯ ಪರ ಸಹಾಯಕ ಸರ್ಕಾರಿ ಅಭಿಯೋಜಕರು ತಮ್ಮ ವಾದವನ್ನು ಮಂಡಿಸುತ್ತಾ, ದಿನಾಂಕಃ 18.02.2021 ರಂದು ರಾತ್ರಿ 8.15 ಗಂಟೆ ಸಮಯದಲ್ಲಿ 1 ನೇ ಆರೋಪಿಯು ಹಾಗೂ 2 ನೇ ಆರೋಪಿಯು ಚಾಲನಾ ಪರವಾನಿಗೆ ಇಲ್ಲದೇ ಮೋಟಾರ್ ಸೈಕಲ್ ಅನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮುಖಮುಖಿ ಡಿಕ್ಕಿ ಪಡಿಸಿ ಅಪಘಾತ ಉಂಟುಮಾಡಿದ್ದು, ಇದರಿಂದ 1 ನೇ ಆರೋಪಿಯು ಮೃತರಾಗಿದ್ದು, 2 ನೇ ಆರೋಪಿಗೆ ಸಾಮಾನ್ಯ ಗಾಯವಾಗಿರುತ್ತದೆ. ಈ ಸಂಬಂಧವಾಗಿ ಅಭಿಯೋಜನೆಯ ಪರ ಎಲ್ಲಾ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಆದ್ದರಿಂದ ಅಭಿಯೋಜನೆಯು 2 ನೇ ಆರೋಪಿಯ ಮೇಲಿರುವ ಆರೋಪಗಳನ್ನು ನಿಸ್ಸಂದೇಹವಾಗಿ ರುಜುವಾತುಪಡಿಸಲು ಸಫಲವಾಗಿರುತ್ತದೆ. ಆದ್ದರಿಂದ 2 ನೇ ಆರೋಪಿಯನ್ನು ದೋಷಿಯೆಂದು ತೀರ್ಮಾನಿಸಿ ಶಿಕ್ಷೆಗೆ ಗುರಿಪಡಿಸಬೇಕೆಂದು ಕೋರಿರುತ್ತಾರೆ.

19. ಆರೋಪಿಯ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, 2 ನೇ ಆರೋಪಿಯ ತಪ್ಪಿನಿಂದ ಅಪಘಾತ ಆಗದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದು, ಅಭಿಯೋಜನೆಯ ಪರ ಪ್ರತ್ಯಕ್ಷ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಅಭಿಯೋಜನೆಯು ಆರೋಪಿಯ ಮೇಲಿರುವ ಆರೋಪಗಳನ್ನು ನಿಸ್ಸಂದೇಹವಾಗಿ ರುಜುವಾತು ಪಡಿಸಲು ವಿಫಲವಾಗಿರುವುದರಿಂದ ಆರೋಪಿಯನ್ನು ನಿರ್ದೋಷಿಯೆಂದು ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ.

20. ಆರೋಪಿಯು ಅಪಘಾತವನ್ನು ಅಲ್ಲಗಳೆದಿರುವುದಿಲ್ಲ, ಕೇವಲ 2 ನೇ ಆರೋಪಿಯ ತಪ್ಪಿನಿಂದ ಅಪಘಾತ ಅಗಿರುವುದಿಲ್ಲ ಎಂಬ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾರೆ. ಆದಕಾರಣ 2 ನೇ ಆರೋಪಿಯ ಸಮ್ಮತಿ ಮೇರೆಗೆ ಶವಪಂಚನಾಮೆ, ವಾಹನ ತಪಾಸಣಾ ವರದಿ, ಶವ ಪರೀಕ್ಷಾ ವರದಿ ಮತ್ತು ನಷ್ಟ ಭರ್ತಿ ಪತ್ರಗಳನ್ನು ನಿಶಾನೆಯಾಗಿ ಗುರುತಿಸಲಾಗಿದ್ದು, ಸದರಿ ದಾಖಲೆಗಳಿಗೆ ಸಂಬಂದಿಸಿದಂತೆ ತಮ್ಮ ತಕರಾರು ಇರುವುದಿಲ್ಲ ಎಂದು 2 ನೇ ಆರೋಪಿಯು ನುಡಿದಿರುತ್ತಾರೆ.

21. ಅಭಿಯೋಜನೆ ಪ್ರಕಾರ ಪ್ರಾಸಾ1 ರವರು ಅಪಘಾತದ ಪ್ರತ್ಯಕ್ಷ ಸಾಕ್ಷಿ ಮತ್ತು ಮಹಜರ್‌ಗೆ ಸಹಕರಿಸಿದ ಬಗ್ಗೆ ಸಾಕ್ಷ್ಯ ನುಡಿಯುವ ಸಾಕ್ಷಿದಾರರಾಗಿದ್ದು ಇವರು ತನ್ನ ಸಾಕ್ಷ್ಯದಲ್ಲಿ ತನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿರುವುದಿಲ್ಲವೆಂದು, ತಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲವೆಂದು ಮತ್ತು ಆರೋಪಿಯ ತಪ್ಪಿನಿಂದ ಅಪಘಾತವಾಗಿದೆ ಎಂದು ಪೊಲೀಸರ ಮುಂದೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುವುದಿಲ್ಲವೆಂದು, ನಿಪಿ1 ಪಂಚನಾಮೆಗೆ ಹುಸ್ಕೂರು ಸರ್ಕಲ್ ಬಳಿ ಸಹಿ ಮಾಡಿದ್ದು ಅದರಲ್ಲಿ ಏನು ಬರೆದಿದೆ ಎಂದು ತನಗೆ ಗೊತ್ತಿರುವುದಿಲ್ಲವೆಂದು, ಪೊಲೀಸರು ತನ್ನ ಸಮಕ್ಷಮ ಯಾವುದೇ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲವೆಂದು ಮತ್ತು ಫೋಟೋಗಳನ್ನು ಯಾವ ಉದ್ದೇಶಕ್ಕೆ ತೆಗೆಸಿರುತ್ತಾರೆಂದು ತನಗೆ ಗೊತ್ತಿರುವುದಿಲ್ಲವೆಂದು ನುಡಿದಿರುತ್ತಾರೆ. ಇವರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ನ್ಯಾಯಾಲಯದ ಅನುಮತಿ ಪಡೆದು ಪಾಟಿ ಸವಾಲು ಮಾಡಿದ್ದು ಆದರೂ ಸಹ ಈ ಸಾಕ್ಷಿಯಿಂದ ಯಾವುದೇ ಉಪಯುಕ್ತ ಮಾಹಿತಿಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ. ಆರೋಪಿ ಪರ ವಕೀಲರು ಪ್ರಾಸಾ1 ರವರನ್ನು ಪಾಟಿ ಸವಾಲು ಮಾಡಿದ್ದು ಅದರಲ್ಲಿ ನಿಪಿ1 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾರೆ.

22. ಪ್ರಾಸಾ2 ಮತ್ತು 3 ರವರು ಅಭಿಯೋಜನೆಯ ಪ್ರಕಾರ ಮಹಜರ್ ಸಾಕ್ಷಿದಾರರಾಗಿದ್ದು ಇವರು ತಮ್ಮ ಸಾಕ್ಷ್ಯದಲ್ಲಿ ನಿಪಿ1 ಮಹಜರ್‌ಗೆ ಪೊಲೀಸರ ಕೋರಿಕೆ ಮೇರೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದು ಅದರಲ್ಲಿ ಏನು ಬರೆದಿದೆ ಎಂದು ತಮಗೆ ಗೊತ್ತಿರುವುದಿಲ್ಲವೆಂದು, ತಮ್ಮ ಸಮಕ್ಷಮ ಪೊಲೀಸರ ಯಾವುದೇ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲವೆಂದು ಮತ್ತು ಯಾವ ಉದ್ದೇಶಕ್ಕೆ ಫೋಟೋಗಳನ್ನು ತೆಗೆಸಿರುತ್ತಾರೆಂದು ತಮಗೆ ಗೊತ್ತಿರುವುದಿಲ್ಲವೆಂದು ನುಡಿದಿರುತ್ತಾರೆ. ಇವರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ನ್ಯಾಯಾಲಯದ ಅನುಮತಿ ಪಡೆದು ಪಾಟಿ ಸವಾಲು ಮಾಡಿದ್ದು ಆದರೂ ಸಹ ಈ ಸಾಕ್ಷಿದಾರರಿಂದ ಯಾವುದೇ ಉಪಯುಕ್ತ ಮಾಹಿತಿಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ. ಆದ್ದರಿಂದ, ಅಭಿಯೋಜನೆಯು ಸ್ಥಳ ಮಹಜರ್ ಅನ್ನು ನಿಸ್ಸಂದೇಹವಾಗಿ ರುಜುವಾತುಪಡಿಸಲು ವಿಫಲವಾಗಿರುವುದು ಕಂಡುಬರುತ್ತದೆ.

23. ಪ್ರಾಸಾ4 ಮತ್ತು 5 ರವರು ತನಿಖಾಧಿಕಾರಿಗಳಾಗಿದ್ದು ತಾವು ಮಾಡಿದ ತನಿಖೆಗೆ ಸಂಬಂಧವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಮೇಲ್ಕಂಡಂತೆ ಚರ್ಚಿಸಿದ ಪ್ರಕಾರ ಆರೋಪಿಯ ನಿರ್ಲಕ್ಷ್ಯತನ ಅಥವಾ ದುಡುಕುತನದ ಚಾಲನೆಯಿಂದ ಅಪಘಾತವಾಗಿರುತ್ತದೆ ಎಂಬುದನ್ನು ನಿಸ್ಸಂದೇಹವಾಗಿ ರುಜುವಾತುಪಡಿಸಲು ಅಭಿಯೋಜನೆಯು ಸಂಪೂರ್ಣವಾಗಿ ವಿಫಲವಾಗಿರುತ್ತದೆ ಎಂದು ಈ ನ್ಯಾಯಾಲಯವು ಅಭಿಪ್ರಾಯ ಪಟ್ಟಿರುತ್ತದೆ. ಈ ಎಲ್ಲಾ ಕಾರಣಗಳಿಂದ ಈ ನ್ಯಾಯಾಲಯವು **ಅಂಶ ಸಂಖ್ಯೆ 1 ರಿಂದ 3 ಅನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

24. **<u>ಅಂಶ ಸಂಖ್ಯೆ 4:</u>** ಪೊಲೀಸರು 2ನೇ ಆರೋಪಿಯ ವಿರುದ್ಧ **ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 3 ಸಹವಾಚಕ 181** ರಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಈ ಪ್ರಾವಿಧಾನದ ಬಗ್ಗೆ ನೋಡುವುದಾದರೆ.

**Section 181 of IMV Act:** Driving vehicles in contravention of section 3 or section 4. - Whoever drives a motor vehicle in contravention of section 3 or section 4 shall be punishable with imprisonment for a term which may extend to three months, or with fine [of five thousand rupees], or with both.

25. 2 ನೇ ಆರೋಪಿಯು ಅಪಘಾತದ ಕಾಲಕ್ಕೆ ಬೈಕ್ ಅನ್ನು ಚಾಲನೆ ಮಾಡಲು ಪರವಾನಿಗೆಯನ್ನು ಹೊಂದಿರಲಿಲ್ಲವೆಂದು ಅಭಿಯೋಜನೆಯು ಅಪಾಧಿಸಿರುತ್ತದೆ. ಸದರಿ ಆಪಾಧನೆಗೆ ಸಂಬಂಧವಾಗಿ ರುಜುವಾತುಪಡಿಸುವ ಹೊಣೆಗಾರಿಕೆಯು 2 ನೇ ಆರೋಪಿಯ ಮೇಲಿರುತ್ತದೆ. ಸದರಿ ಸಂಗತಿಯನ್ನು ರುಜುವಾತುಪಡಿಸಲು 2 ನೇ ಆರೋಪಿಯು ಚಾಲನಾ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕಾಗಿರುತ್ತದೆ. ಅಪಘಾತದ ಕಾಲಕ್ಕೆ 2 ನೇ ಆರೋಪಿಯು ಕೆಎ-11-ಇಎನ್-6194 ನಂಬರಿನ ಮೋಟಾರ್ ಸೈಕಲ್ ಅನ್ನು ಚಾಲನೆ ಮಾಡಿರುತ್ತಾರೆ ಎಂಬ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. 2 ನೇ ಆರೋಪಿಯು ಅಪಘಾತದ ಕಾಲಕ್ಕೆ ತಾನು ಬೈಕ್ ಅನ್ನು ಚಾಲನೆ ಮಾಡಲು ಪರವಾನಿಗೆ ಹೊಂದಿದ್ದೆ ಎಂದು ರುಜುವಾತುಪಡಿಸಲು ವಿಫಲವಾಗಿರುತ್ತಾರೆ. ಈ ಬಗ್ಗೆ 2 ನೇ ಆರೋಪಿಯು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆದಕಾರಣ, ಈ ನ್ಯಾಯಾಲಯವು ಅಪಘಾತ ಕಾಲಕ್ಕೆ 2 ನೇ ಆರೋಪಿಗೆ ಬೈಕ್ ಅನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಇರಲಿಲ್ಲ ಎಂದು ಅಭಿಪ್ರಾಯಪಟ್ಟು **ಅಂಶ ಸಂಖ್ಯೆ 4 ಅನ್ನು ಸಕರಾತ್ಮಕವಾಗಿ ಉತ್ತರಿಸಲಾಗಿದೆ.**

26. **ಅಂಶ ಸಂಖ್ಯೆ 5 ಃ** ಈ ಮೇಲಿನ 1 ರಿಂದ 4 ನೇ ಅಂಶಗಳಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## ಃಃ ಆದೇಶ ಃಃ

ದಂಡ ಪ್ರಕ್ರಿಯಾ ಸಂಹಿತೆ ಕಲಂ **255(1)** ರಂತೆ ಇರುವ ಅಧಿಕಾರವನ್ನು ಚಲಾಯಿಸಿ **2** ನೇ ಆರೋಪಿಯ ಮೇಲಿರುವ ಭಾರತೀಯ ದಂಡ ಸಂಹಿತೆ ಕಲಂ **279, 337** ಮತ್ತು **304(ಎ)** ರಂತೆ ಇರುವ ಆರೋಪಗಳಿಂದ ದೋಷ ಮುಕ್ತಗೊಳಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ **255(2)** ರಂತೆ ಇರುವ ಅಧಿಕಾರವನ್ನು ಚಲಾಯಿಸಿ **2** ನೇ ಆರೋಪಿಯ ಮೇಲಿರುವ ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ **3** ಸಹವಾಚಕ ಕಲಂ **181** ರಂತೆ ಇರುವ ಆರೋಪಗಳಿಂದ ಅಪರಾಧಿ ಎಂದು ತೀರ್ಮಾನಿಸಲಾಗಿದೆ.

**2** ನೇ ಆರೋಪಿಗೆ ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ **3** ಸಹವಾಚಕ ಕಲಂ **181** ರಂತೆ ಇರುವ ಅಪರಾಧಕ್ಕಾಗಿ ರೂ.**2,000/-** ದಂಡ ವಿಧಿಸಲಾಗಿದೆ. ಸದರಿ ದಂಡದ ಮೊತ್ತವನ್ನು **2** ನೇ ಆರೋಪಿಯು ಪಾವತಿಸಲು ವಿಫಲವಾದಲ್ಲಿ ಅವರಿಗೆ **10** ದಿನಗಳ ಸಾಧಾರಣ ಕಾರಾಗೃಹ ಶಿಕ್ಷೆಯನ್ನು ವಿಧಿಸಲಾಗಿದೆ.

ಆರೋಪಿ ಮತ್ತು ಜಾಮೀನುದಾರರು ಬರೆದುಕೊಟ್ಟ ಮುಚ್ಚಳಿಕೆಯು ಈ ದಿನದಿಂದ **6** ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ.

**ಈ ಪ್ರಕರಣದಲ್ಲಿ ವಾಹನವನ್ನು ಈಗಾಗಲೇ ಅದರ ಮಾಲೀಕರು ಪೊಲೀಸ್ ಠಾಣೆಯ ಮೂಲಕ ಬಿಡಿಸಿಕೊಂಡಿದ್ದು ಮೇಲ್ಮನವಿ ಅವಧಿ ಮುಗಿದ ನಂತರ ಸದರಿ ವಾಹನದ ಮಾಲೀಕರಿಗೆ ಸಂಪೂರ್ಣವಾದದ್ದಾಗಿರುತ್ತದೆ.**

**ತೀರ್ಪಿನ ದೃಢೀಕೃತ ಪ್ರತಿಯನ್ನು ತಕ್ಷಣ 2 ನೇ ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 363 ರ ಪ್ರಕಾರ ನೀಡಲು ಕಛೇರಿಗೆ ಸೂಚಿಸಲಾಗಿದೆ.**

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, **2026 ನೇ ಇಸವಿ ಏಪ್ರಿಲ್ 2 ನೇ** ದಿನಾಂಕದಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಲಾಯಿತು.)

**(ಮಹೇಂದ್ರ ಎಂ.)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಮಳವಳ್ಳಿ**

**:ಅನುಬಂಧ:**

**ಅಭಿಯೋಜನೆಯ ಪರವಾಗಿ ವಿಚಾರಣೆಗೊಳ್ಳಪಟ್ಟ ಸಾಕ್ಷಿದಾರರ ಪಟ್ಟಿ**

ಪ್ರಾಸಾ-1 : ಶ್ರೀ ಶಿವಲಿಂಗಯ್ಯ
ಪ್ರಾಸಾ-2 : ಶ್ರೀ ಸತೀಶ್
ಪ್ರಾಸಾ-3 : ಶ್ರೀ ಚಿಕ್ಕಣ್ಣ
ಪ್ರಾಸಾ-4 : ಶ್ರೀ ಪುರುಷೋತ್ತಮ್.ಜಿ
ಪ್ರಾಸಾ-5 : ಶ್ರೀ ಧನರಾಜ್.ಡಿ.ಪಿ

**ಆರೋಪಿತರ ಪರವಾಗಿ ವಿಚಾರಣೆಗೊಳ್ಳಪಟ್ಟ ಸಾಕ್ಷಿದಾರರ ಪಟ್ಟಿ**

-ಇಲ್ಲ-

**ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ**

ನಿಪಿ.1 : ಸ್ಥಳ ಪಂಚನಾಮೆ

ನಿಪಿ.1(ಎ) ಃ ಪ್ರಾಸಾ1 ರವರ ಸಹಿ
ನಿಪಿ.1(ಬಿ) ಃ ಪ್ರಾಸಾ2 ರವರ ಸಹಿ
ನಿಪಿ.1(ಸಿ) ಃ ಪ್ರಾಸಾ4 ರವರ ಸಹಿ
ನಿಪಿ.2 ರಿಂದ 5 ಃ ಫೋಟೋಗಳು
ನಿಪಿ.6 ಃ ಹೇಳಿಕೆ
ನಿಪಿ.7 ಃ ಮರುಹೇಳಿಕೆ
ನಿಪಿ.8 ಃ ದೂರು
ನಿಪಿ.8(ಎ) ಃ ಪ್ರಾಸಾ4 ರವರ ಸಹಿ
ನಿಪಿ.3(ಸಿ) ಃ ಪ್ರಾಸಾ5 ರವರ ಸಹಿ
ನಿಪಿ.9 ಃ ಪ್ರಥಮ ವರ್ತಮಾನ ವರದಿ
ನಿಪಿ.10 ಃ ಕಚ್ಚಾ ನಕಾಶೆ
ನಿಪಿ.11 ಃ ಶವ ಪಂಚನಾಮೆ
ನಿಪಿ.12 & 13 ಃ ಕಲಂ 133 ನೋಟೀಸ್ ಮತ್ತು ಪ್ರತ್ಯುತ್ತರ
ನಿಪಿ.14 ಃ ಇಂಡಿಮಿನಿಟಿ ಬಾಂಡ್
ನಿಪಿ.15 ಃ ಪಿ.ಎಂ ವರದಿ
ನಿಪಿ.16 ಃ ಆರ್‌ಟಿಓ ರವರಿಗೆ ಸಲ್ಲಿಸಿದ ಮನವಿ
ನಿಪಿ.17 ಃ ಐಎಂವಿ ವರದಿ
ನಿಪಿ.18 & 19 ಃ ಕಲಂ 133 ನೋಟೀಸ್ ಮತ್ತು ಪ್ರತ್ಯುತ್ತರ

**ಆರೋಪಿತರ ಪರವಾಗಿ ಗುರುತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ**

-ಇಲ್ಲ-

**ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ಮುದ್ದೆಮಾಲುಗಳುಃ**

-ಇಲ್ಲ-

**(ಮಹೇಂದ್ರ ಎಂ.)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಮಳವಳ್ಳಿ.**